
ಒಂದಾಣೆ ಮಾಲೆ.

209.

ಭಾರತದ ಪ್ರಥಮಾಧ್ಯಕ್ಷ

ಡಾ॥ ಬಾಬೂ ರಾಜೇಂದ್ರ ಪ್ರಸಾದರು

(ಅವರ ಸಂಕ್ಷಿಪ್ತ ಜೀವನ ಚರಿತ್ರೆ.)



ಲೇ: ಪಿ. ರಾಮಣ್ಣ ಚಡಗ.

1958.

ಬೆಲೆ: ಆಣೆ ೧.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್

ಸಿಂಡಿಕೇಟ್ ಲಿಮಿಟೆಡ್

★

ಮಂಗಳೂರು ಶಾಖೆಗಳು:

ಹಂಪನಕಟ್ಟೆ ★ ಬಂದರ

ಪ್ರಧಾನ ಕಾರ್ಯಾಲಯ:

ಮುಕುಂದ ನಿವಾಸ, ಉಡುಪಿ.

ಬೆಂಗಳೂರು

ಮುಂಬಯಿ ★ ಕೊಚ್ಚಿ

ಹೈದರಾಬಾದು ಮದರಾಸು

ಭಾರತದ ಪ್ರಥಮಾಧ್ಯಕ್ಷ

ಡಾ| ಬಾಬೂ ರಾಜೇಂದ್ರ ಪ್ರಸಾದರು

(ಸಂಕ್ಷಿಪ್ತ ಜೀವನ ಚರಿತ್ರೆ)

ಗಾಂಧೀಜಿಯವರ ಪ್ರಮುಖ್ಯ ಶಿಷ್ಯರಲ್ಲೊಬ್ಬರೆನಿಸಿ, ಸಾತ್ವಿಕಜೀವನ ನಡೆಸಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಗಳಲ್ಲಿ ಭಾಗವಹಿಸಿ ಅನೇಕ ಬಾರಿ ಕಾರಾಗೃಹವಾಸವನ್ನೂ ಅನುಭವಿಸಿ, ತನ್ನ ಜೀವನವನ್ನು ಜನತಾಸೇವೆಗೊಪ್ಪಿಸಿ, ಜನತಾ ರಾಜ್ಯದಲ್ಲಿ "ಭಾರತದ ನಾಲ್ಕು ಕಲಶ"ಗಳಲ್ಲಿ ಒಂದಾದ ಅಧ್ಯಕ್ಷಸ್ಥಾನವನ್ನು ಅಲಂಕರಿಸಿ, ಸರ್ವರಿಂದಲೂ ವಿನಯಮೂರ್ತಿ—ಸಭ್ಯತೆಯ ಮೂರ್ತಿ ಎನಿಸಿಕೊಳ್ಳುವ ಭಾರತೀಯ ಕಣ್ಮಣಿಗಳೆಂದರೆ ಬಾಬೂ ರಾಜೇಂದ್ರ ಪ್ರಸಾದರು.

ಉತ್ತರ ಪ್ರದೇಶದ ಕಾಯಸ್ತ ಪಂಗಡದವರು ಬಿಹಾರ ಪ್ರಾಂತ್ಯದ ಸಾರಣ ಜಿಲ್ಲೆಯಲ್ಲಿ ಕಳೆದ ಕೆಲವು ಶತಮಾನಗಳಿಂದ ನೆಲೆಸಿದ್ದರು. ಅದೇ ಪಂಗಡದ ಮಿಶ್ರೀಲಾಲರ ಮಗನಾಗಿ ಮಹಾದೇವ ಸಹಾಯರು ಹುಟ್ಟಿದರು. ಮಹಾದೇವ ಸಹಾಯರಿಗೆ ೫ ಜನ ಮಕ್ಕಳು. ಇವರ (ಮಿಶ್ರೀಲಾಲರ) ಅಣ್ಣ ಚೌಧುರೀಲಾಲರು. ಮಹಾದೇವ ಸಹಾಯರಿಗೆ ಮೂವರು ಹೆಣ್ಣು ಮಕ್ಕಳು. ಒಬ್ಬಳು ಚಿಕ್ಕಂದಿನಲ್ಲೇ ತೀರಿದ್ದಳು. ಹಿರಿಯ ಮಗಳು ಭಗವತೀ ದೇವಿ. ಮದುವೆಯಾದ ಕೆಲವೇ ದಿನಗಳಲ್ಲಿ ವಿಧವೆಯಾಗಿ ತೌರನ್ನು ಸೇರಿದಳು. ಇನ್ನೊಬ್ಬಳು, ಹಡೆಯದೆ ಕಾಲವಾದಳು. ಮಹಾದೇವರ ಹಿರಿಮಗ ಮಹೇಂದ್ರ ಪ್ರಸಾದರು. ಎರಡನೇ ಮಗ ನಮ್ಮ ರಾಜೇಂದ್ರ ಪ್ರಸಾದರು, 1884ನೇ ಇಸವಿ ದಶಂಬರ 3ನೆಯ ದಿನಾಂಕ ಜನಿಸಿದರು.

ಪ್ರಸಾದರೆಂದರೆ ತಾಯಿಗೂ, ಅಜ್ಜಿಗೂ ಬಹಳ ಪ್ರೀತಿ. ರಾಜೇಂದರು ಕತ್ತಲಾಗುವ ಮುನ್ನವೇ ಮಲಗುತ್ತಿದ್ದರು. ಈ ಅಭ್ಯಾಸ ಮುಂದೆ ಅವರು ಎಮ್. ಎಲ್. ಪರೀಕ್ಷೆಗೆ ತಯಾರಿಮಾಡುವಾಗಲೂ ತೊಂದರೆ ಕೊಡುತ್ತಿತ್ತು.

ರಾಜೇಂದ್ರರಿಗೆ ಆರನೇ ವರ್ಷ ಪ್ರಾಯದಲ್ಲಿ ಮೌಲ್ವಿ ಸಾಹೇಬರಿಂದ ಸುಮುಹೂರ್ತದಲ್ಲಿ ಫಾರಸಿಯಲ್ಲಿ ಓನಾಮ ಪ್ರಾರಂಭವಾಯಿತು. ರಾಜೇಂ

ದ್ರರಿಗೆ ಅದರಿಂದ ಪಾಠಸಿಗುವುದಕ್ಕಿಂತಲೂ ಹೆಚ್ಚಾಗಿ ಆನಂದವು ದೊರೆಯುತ್ತಿತ್ತು. ಕೆಲಸಮಯದಲ್ಲಿ ಬೇರೊಬ್ಬ ಮೌಲ್ವಿಗಳು ಬಂದರು. ಇವರು ಗಂಭೀರ ಸ್ವಭಾವದವರಾಗಿದ್ದುದರಿಂದ ರಾಜೇಂದ್ರರಿಗೆ ಚಿಕ್ಕ ಫಾರಸಿ ಗ್ರಂಥ ಅಧ್ಯಯನ ಮಾಡುವಷ್ಟು ಜ್ಞಾನವು ಲಭಿಸಿತು.

ರಾಜೇಂದ್ರರು 'ಎ.ಬಿ.ಸಿ.'ಯನ್ನು ಕಲಿತದ್ದು ಅಣ್ಣನೊಂದಿಗೆ ಛಪರಾದಲ್ಲಿ. ಮೊದಲ ತರಗತಿಯಲ್ಲಿ ಸರ್ವಪ್ರಥಮರಾಗಿ ತೇರ್ಗಡೆಹೊಂದಿದರು. ಮುಂದೆ ಅಣ್ಣನು ಪಾಟ್ನಾಕ್ಕೆ ಹೋಗಿ ಸೇರಿದ ಕೆಲವೇ ಸಮಯದಲ್ಲಿ ರಾಜೇಂದ್ರರೂ ಅಲ್ಲಿಗೆ ಹೋಗಿ, 'ಟಿ. ಕೆ ಘೋಷ್ ಎಕೆಡಮಿ' ಎಂಬ ಶಾಲೆಗೆ ಸೇರಿದರು. ಅಣ್ಣನು ಎಫ್. ಎ. ಪಾಸು ಮಾಡಿದ ನಂತರ ರಾಜೇಂದ್ರರು ಒಬ್ಬರೇ ಅಲ್ಲಿರಬೇಕಾಯಿತು. ರಾಜೇಂದ್ರರಿಗೆ ಹನ್ನೆರಡನೇ ವಯಸ್ಸಿನಲ್ಲಿ ಲಗ್ನವಾಯಿತು.

ರಾಜೇಂದ್ರರು ಮುಂದೆ ಹಥುವಾ ಶಾಲೆಗೆ ಸೇರಿದರು. ಪ್ರತಿಯೊಂದು ಪಾಠವನ್ನು ೧೨೦ ಬಾರಿ ಓದಿದರೆ ಅದು ಕಂಠಸ್ಥವಾಗುವುದೆಂದು ಓರ್ವ ಉಪಾಧ್ಯಾಯರು ತಿಳಿಸಿದ್ದರಿಂದ ರಾಜೇಂದ್ರರು ಅದರಂತೆಯೇ ಮಾಡಿ, ಕಾಯಿಲೆ ಬಿದ್ದು, ಫೈಲಾಗಿ, ತಿರುಗಿ ಅಣ್ಣನ ಪ್ರೇರಣೆಯಂತೆ ಛಪರಾ ಶಾಲೆಯಲ್ಲಿ ಅದೇ ತರಗತಿಗೆ ಸೇರಿದರು. ಅಲ್ಲಿ ರಸಿಕಬಾಬೂ ಎಂಬ ಅಧ್ಯಾಪಕರಿಂದ ರಾಜೇಂದ್ರರಿಗೆ ಪ್ರೋತ್ಸಾಹ ಸಿಕ್ಕಿತು. ಎರಡು ಮೂರು ಬಾರಿ ಕಾಯಿಲೆ ಬಂದಲ್ಲೂ ರಸಿಕಬಾಬೂ ರಾಜೇಂದ್ರರಿಗೆ ಓದಲು ಪ್ರೋತ್ಸಾಹ ವಿತ್ತರು. ವಿದ್ಯಾರ್ಥಿಗಳಾಗಿರುವಾಗ ರಾಜೇಂದ್ರರು ಸರಳ ಜೀವನವನ್ನು ನಡೆಸುತ್ತಿದ್ದರು. ಛಪರಾ ಶಾಲೆ(ಹೈಸ್ಕೂಲು)ಯ ಕೊನೆಯ ಪರೀಕ್ಷೆಯಲ್ಲಿ ಪ್ರಪ್ರಥಮ ಸ್ಥಾನಗಳಿಸಿದ ಪ್ರಸಾದರಿಗೆ ವಿದ್ಯಾರ್ಥಿ ವೇತನವು ಸಿಕ್ಕಿತು.

1902ನೇ ಇಸವಿಯಲ್ಲಿ ರಾಜೇಂದ್ರರು ಮೊದಲ ಬಾರಿ ಕಲ್ಕತ್ತವನ್ನು ನೋಡಿದರು. ಪ್ರಿನ್ಸಿಪಾಲ್ ಪಿ.ಕೆ. ಘೋಷರು ರಾಜೇಂದ್ರರ ಕುಶಾಗ್ರ ಬುದ್ಧಿಗೆ ಮೆಚ್ಚಿ ವಿಶೇಷ ರಿಯಾಯತಿ ತೋರಿ, ಪ್ರೆಸಿಡೆನ್ಸಿ ಕೊಲೆಜಿಗೆ ಸೇರಿಸಿಕೊಂಡರು. ರಾಜೇಂದ್ರರು ಎಂ. ಎ., ಕಲಿಯುತ್ತಿದ್ದ ಅಣ್ಣನೊಂದಿಗೆ ಹಾಸ್ಟೇಲಿನಲ್ಲೇ ಉಳಿದರು. ಪ್ರೆಸಿಡೆನ್ಸಿ ಕೊಲೆಜಿನಲ್ಲಿ ರಾಜೇಂದ್ರರಿಗೆ ಭಾರತೀಯ ಮಹಾ ವಿಜ್ಞಾನಿಗಳಾದ ಜೆ. ಸಿ. ಬೋಸರ ಪರಿಚಯವಾಯಿತು.

ಅದೇ ಶಾಲೆಯಲ್ಲಿಯೇ ಬಿ. ಸಿ. ರಾಯ್‌ರವರು ರಸಾಯನ ಶಾಸ್ತ್ರವನ್ನು ಕಲಿಸುತ್ತಿದ್ದರು.

ಎರಡನೇ ವರ್ಷದ ಕಾಲೇಜಿನ ವಿದ್ಯಾರ್ಥಿ ಜೀವನದಲ್ಲಿ ರಾಜೇಂದ್ರರು ಚಳಿಜ್ವರದಿಂದ ಪೀಡಿತರಾಗುತ್ತಿದ್ದರು. ಹೀಗಿದ್ದೂ, ಇಂಟರ್ ಪರೀಕ್ಷೆಯಲ್ಲಿ ಸರ್ವಪ್ರಥಮರಾಗಿ ತೇರ್ಗಡೆ ಹೊಂದಿದರು. ಇವರಿಗೆ 'ಸರ್ವಪ್ರಥಮ'ಕ್ಕಾಗಿ ೨೫ ರೂ., ಇಂಗ್ಲೀಷಿಗೆ ೧೦ ರೂ., ಇತರ ಪಾಠಗಳಿಗೆ ೧೫ ರೂ. ಹೀಗೆ ೫೦ ರೂ.ಗಳ ವಿದ್ಯಾರ್ಥಿವೇತನವು ದೊರೆಯಿತು. ಮುಂದೆ ಬಿ. ಎ.ಯನ್ನು ಓದುತ್ತಿರುವಾಗ ಸತೀಶಚಂದ್ರ ಬೆನರ್ಜಿಯವರ 'ಡೊನ್ ಸೊಸೈಟಿ'ಯ ಸದಸ್ಯರಾದರು. ವಿದ್ಯಾರ್ಥಿಗಳನ್ನು ಸನ್ಮಾರ್ಗಕ್ಕೊಯ್ಯುವುದೇ ಈ ಸಂಸ್ಥೆಯ ಗುರಿ. ಹಲವಾರು ಪ್ರಭೃತಿಗಳೂ, ವಿಚಾರವೇತ್ತರೂ ಮಾಡುವ ಅಮೋಘ ಭಾಷಣಗಳನ್ನು ವಿದ್ಯಾರ್ಥಿಗಳು ಸಂಗ್ರಹಿಸಬೇಕಿತ್ತು. ರಾಜೇಂದ್ರರು ಪ್ರಥಮ ವರ್ಷದ ಅಂತ್ಯದಲ್ಲಿ ಈ ಸಂಸ್ಥೆಯಲ್ಲೂ ಪ್ರಥಮವಾಗಿ ಪುರಸ್ಕಾರವನ್ನು ಪಡೆದರು. ಪುರಸ್ಕಾರ ನೀಡುವಾಗ ಇತ್ತ ಶ್ರೀ ಗುರುದಾಸ ಬ್ಯಾನರ್ಜಿಯವರ ಉಪದೇಶದಿಂದ ರಾಜೇಂದ್ರರ ಮನಸ್ಸು ಸಮಾಜದತ್ತ ತಿರುಗಿತು.

1905ರಲ್ಲಿ ವಂಗಭಂಗ ಚಳವಳಿಯು ನಡೆಯಿತು. ವಿದೇಶಿ ವಸ್ತುಗಳಿಗೆ ಬಹಿಷ್ಕಾರ ಮತ್ತು ಸ್ವದೇಶಿ ವಸ್ತುಗಳ ಪ್ರಚಾರವೇ ಇದರ ಧ್ಯೇಯವಾಗಿತ್ತು. ಸತೀಶಚಂದ್ರರು ಒಂದು ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಿದರು. ವಂಗಭಂಗ ಚಳವಳಿಯು ರಾಜೇಂದ್ರರನ್ನು ಎಚ್ಚರಗೊಳಿಸಿತು. ಮುಂದೆ ಬಿ.ಎ. ಆನರ್ಸ್‌ನಲ್ಲೂ ರಾಜೇಂದ್ರರು ಮೊದಲ ಸ್ಥಾನವನ್ನು ಗಳಿಸಿ ತಿಂಗಳಿಗೆ ಒಟ್ಟು ೯೦ ರೂ.ಗಳ ಪುರಸ್ಕಾರಕ್ಕೆ ಪಾತ್ರರಾದರು.

ಎಂ.ಎ. ಮತ್ತು ಬಿ.ಎಲ್. ಪರೀಕ್ಷೆಗಳಿಗೆ ಅಧ್ಯಯನವನ್ನು ಆರಂಭಿಸಿದ್ದ ರಾಜೇಂದ್ರರಿಗೆ ವಿಲಾಯಿತಿಗೆ ಹೋಗಿ ಐ ಸಿ.ಎಸ್. ಪದವೀಧರರಾಗುವ ಬಯಕೆಯಿದ್ದರೂ, ತಂದೆಯ ಮರಣದಿಂದಾಗಿ (1907) ಅವರು ಅದನ್ನು ನಿಲ್ಲಿಸಬೇಕಾಯಿತು. ಎಂ. ಎ. ಯನ್ನು ಮುಂದುವರಿಸಿ ಪಾಸಾದರು.

1908ರ ಜುಲೈಯಲ್ಲಿ ಅವರು ಮುಜಫರ್‌ಪುರದ ಕಾಲೇಜೊಂದರಲ್ಲಿ ಅಧ್ಯಾಪಕರಾದರು. ಆದರೆ, ವಕೀಲರಾಗಬೇಕೆಂದು ಆಶಿಸಿದ್ದ ಅವರ ಅಣ್ಣನ ಒತ್ತಾಯದಿಂದಾಗಿ 1909ರಲ್ಲಿ ಅವರು ಕಲ್ಕತ್ತೆಗೆ ಹಿಂದಿರುಗಿದರು. ಸ್ವಲ್ಪ

ದಿನ ಸಿಟಿ ಕೊಲಿಜಿನ ಪ್ರೊಫೆಸರರಾಗಿ, ಅನಂತರ ಮನೆಯಲ್ಲೇ ಮಕ್ಕಳಿಗೆ ಹೇಳಿಕೊಡುತ್ತ, ಅದರೊಂದಿಗೆ ತಾವೂ ವಕಾಲತ್ತಿನ ಅಧ್ಯಯನ ಮಾಡ ತೊಡಗಿದರು. ಕೆಲದಿನಗಳ ತನಕ ಬಹಾದುರ್ ರಹೀಮರಲ್ಲೂ ಅನಂ ತರ ಕಲ್ಕತ್ತೆಯ ವಿಖ್ಯಾತ ವಕೀಲರಾದ ಶಮ್ ಸುಲ್ ಹುದಾ ಸಾಹೇಬರಲ್ಲೂ ಕೆಲಸಮಾಡಿದರು. ಇದರೊಂದಿಗೆ ಕಲ್ಕತ್ತೆಯಲ್ಲಿ ವ್ಯಾಸಂಗ ಮಾಡುತಿದ್ದ ವಿದ್ಯಾರ್ಥಿಗಳಿಂದ ರಚಿತವಾದ "ಬಿಹಾರಿ ಕ್ಲಬ್ಬಿ"ನಲ್ಲೂ ಆಗಾಗ ಭಾಗ ವಹಿಸುತ್ತಿದ್ದರು. ಇದಕ್ಕೆ ಅತಿಥಿಗಳಾಗಿ ಬರುತ್ತಿದ್ದ ರಾಜಕೀಯ ಧುರೀಣ ರಾದ ಅನ್ನಿಬಿಸೆಂಟ್, ಸರೋಜಿನಿ ದೇವಿ ಮೊದಲಾದವರ ಪರಿಚಯವುಂಟಾ ಯಿತು. ಮುಂದೆ ರಾಜೇಂದ್ರರೂ ಒಂದು ಬಾರಿ ಈ ಸಮ್ಮೇಳನದ ಅಧ್ಯಕ್ಷ ರಾದರು. ಸಾರ್ವಜನಿಕ ಸೇವೆಯೇ ಇದರ ಪ್ರಮುಖ ಗುರಿಯಾಗಿತ್ತು.

ವಕೀಲಿ ವೃತ್ತಿಗೆ ಕೈಯಿಕ್ಕಿದ ಪ್ರಸಾದರಿಗೆ ಶಮ್ ಸುಲ್ ಹುದಾ ಸಾಹೆ ಬರೇ ಪ್ರಾರಂಭದಲ್ಲಿ ಮೊಕದ್ದಮೆಯನ್ನು ಕೊಡಿಸಿ 'ಹಣದಾಸೆಯಿರಿಸಬೇಡ, ಈಗ ಎಷ್ಟೇ ಹಣವಿರಲಿ....ನಿನ್ನಲ್ಲಿ ಬಂದವರಿಗೆ ನ್ಯಾಯಸಿಗುವಂತೆ ಮಾಡು. ಹಣದಾಸೆಯಿಂದ ಕೆಟ್ಟ ಕಕ್ಷಿಗಾರರ ಸಹವಾಸಮಾಡಬೇಡ' ಎಂದು ಉಪ ದೇಶವಿತ್ತಿದ್ದರು. ಇದೇ ರಾಜೇಂದ್ರರಿಗೆ ವೇದವಾಕ್ಯವಾಯಿತು. ಇವರ ಸೂಕ್ಷ್ಮಮತಿಯನ್ನು ನೋಡಿ ಲೋ ಕೊಲೇಜಿನಲ್ಲಿ ಅವರನ್ನು ಪ್ರೊಫೆಸರರ ಸ್ಥಾನಕ್ಕೆ, ಅದರ ಅಧಿಕಾರಿಗಳಾದ ಅಶುತೋಷರು ಆಯ್ಕೆ ಮಾಡಿದರು!

1906ರ ಡಿಸೆಂಬರಿನಲ್ಲಿ ನಡೆದ ಕಲ್ಕತ್ತಾದ ಕೊಂಗ್ರೆಸ್ ಅಧಿವೇಶನ ದಲ್ಲಿ ದಾದಾಭಾಯಿ ನೌರೋಜಿಯವರು ಅಧ್ಯಕ್ಷರಾಗಿದ್ದರು. ಅಂದು ರಾಜೇಂದ್ರರು ಸ್ವಯಂಸೇವಕರಾಗಿ ಅದರಲ್ಲಿ ಭಾಗವಹಿಸಿದರು. ಕೊಂಗ್ರೆಸಿ ನತ್ತ ಅವರ ಮನಸ್ಸು ಹರಿಯಿತು. 1911ರಲ್ಲಿ ನಡೆದ ಕಲ್ಕತ್ತೆಯ ಅಧಿ ವೇಶನದಲ್ಲೂ ಭಾಗವಹಿಸಿ ಭಾರತದ ಹೆಚ್ಚಿನ ಕೊಂಗ್ರೆಸ್ ಕಾರ್ಯಕರ್ತರ ಪರಿಚಯಮಾಡಿಕೊಂಡರು.

1910ರ ಬಿಹಾರಿ ಕ್ಲಬ್ಬಿನ ಸಮ್ಮೇಳನದಲ್ಲಿ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಶ್ರೀ। ಗೋಖಲೆಯವರು ಅಂದಿನ ಸಭೆಯ ಹೆಚ್ಚಿನ ಕಾರ್ಯ ಕ್ರಮದಲ್ಲಿ ಭಾಗವಹಿಸಿದ ರಾಜೇಂದ್ರರನ್ನು ಮೆಚ್ಚಿ, ದೇಶಪ್ರೇಮದತ್ತ ಅವರ ನ್ನೆಳೆದರು. ಮುಂದೆ ಅವರು ಬಿ.ಎಲ್. ಪರೀಕ್ಷೆಯಲ್ಲಿ ತೇರ್ಗಡೆಯಾದರು. ಅದೇ ಸಮಯದಲ್ಲಿಯೇ ಅವರ ತಾಯಿಯೂ ತೀರಿಕೊಂಡರು

1911ರ ದೆಹಲಿಯ ದರ್ಬಾರಿನೊಂದಿಗೆ ಬಂಗಾಳದಲ್ಲಿ ಲೀನವಾಗಿದ್ದ ಬಿಹಾರು ಒಂದು ಪ್ರಾಂತ್ಯವಾಯಿತು. ಹೈಕೋರ್ಟೂ ಸ್ಥಾಪನೆಯಾಯಿತು. ಇದರಿಂದಾಗಿ ಪ್ರಸಾದರು ಎಂ ಎಲ್. ಪರೀಕ್ಷೆಗೆ ಅಧ್ಯಯನಮಾಡಿ, 1915ರಲ್ಲಿ ಸರ್ವಪ್ರಥಮರಾಗಿ ತೇರ್ಗಡೆಹೊಂದಿದರು. 1916ರಲ್ಲಿ ಪಾಟ್ನಾದ ಹೈಕೋರ್ಟಿನಲ್ಲಿ ಕಾರ್ಯಾರಂಭಮಾಡಿದರು.

ಸದಾ ಸರಳ ಉಡುಪಿನಲ್ಲಿರುವ ರಾಜೇಂದ್ರರನ್ನು ಒಮ್ಮೆ ವಕೀಲ ಸಾಹೇಬನೊಬ್ಬನು ಅಹಂಕಾರದಿಂದ ಹಂಗಿಸಿದನಂತೆ. ಆದರೆ, ಚಮಕಿನ ಪೋಷಾಕುಗಳೇ ಸಭ್ಯ ಗೃಹಸ್ಥನನ್ನು ರಚಿಸುವುದಿಲ್ಲವೆಂದು ತಿಳಿದಿದ್ದ ಪ್ರಸಾದರು, ಆ ದುರಹಂಕಾರಿಯ ಮಾತುಗಳನ್ನು ಲಕ್ಷಿಸಲಿಲ್ಲ.

ಬಿಹಾರದಲ್ಲಿ ವಿಶ್ವವಿದ್ಯಾಲಯವನ್ನು ತೆರೆಯುವಂತೆ ಮಾಡದಿರುವಲ್ಲಿ ರಾಜೇಂದ್ರರೇ ಕಾರಣರಾಗಿದ್ದರು. ವಿದ್ಯಾರ್ಥಿ ಸಮ್ಮೇಳನದ ಸಭೆಯನ್ನು ಅಲ್ಲಲ್ಲಿ ಜರಗಿಸಿ, ವಿದ್ಯಾಪ್ರಚಾರದ ಮಹತ್ವದ ಚಿಕ್ಕ ಪುಸ್ತಕಗಳನ್ನು ಪ್ರಕಟಿಸಿ, ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. 1916ರಲ್ಲಿ ಲಕ್ನೋದ ಕಾಂಗ್ರೆಸ್ಸು ಈ ಮಸೂದೆಯನ್ನು ವಿರೋಧಿಸಿತು. ಮುಂದೆ ವಿಶ್ವವಿದ್ಯಾಲಯವು ಸ್ಥಾಪಿತವಾದ ಮೇಲೆ ರಾಜೇಂದ್ರರು ಅದರ ಸೆನೇಟಿನ ಸದಸ್ಯರಾಗಿ ಮಾತೃಭಾಷೆಯ ಮೂಲಕ ಮೂಲಶಿಕ್ಷಣ ಕೊಡಬೇಕೆಂದು ವಾದಿಸಿ ಜಯಶೀಲರಾದರು.

ಹಿಂದೀ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದ ರಾಜೇಂದ್ರರು ಅದರ ಮೂರನೆಯ ಕಲ್ಕತ್ತೆಯ ಸಮ್ಮೇಳನದ ಕಾರ್ಯದರ್ಶಿಯಾಗಿ ಆರಿಸಲ್ಪಟ್ಟರು. 1914ರಲ್ಲಿ ಬಂಗಾಳ ಹಾಗೂ ಬಿಹಾರದಲ್ಲಿ ಮಹಾಪೂರದಿಂದ ಉಂಟಾದ ಸಂಕಷ್ಟ ಸಮಯದಲ್ಲಿ ಪರಿಹಾರ ನಿಧಿಯನ್ನು ಕೂಡಿಸಲು ರಾಜೇಂದ್ರರು ಚೆನ್ನಾಗಿ ಶ್ರಮಿಸಿ, ಪೀಡಿತರಿಗೆ ಆಹಾರವನ್ನೊದಗಿಸುವುದೇ ಮೊದಲಾದ ಸಮಾಜಸೇವಾ ಕಾರ್ಯದಲ್ಲಿ ಮುಂದಾಳುಗಳಾದರು.

ರಾಜೇಂದ್ರರು 1916ರ ಲಕ್ನೋ ಕಾಂಗ್ರೆಸಿಗೆ ತೆರಳಿದಾಗ, ಅಲ್ಲಿ ಅವರಿಗೆ ಗಾಂಧಿಯವರ ಪರಿಚಯವಾಯಿತು. ಬಿಹಾರಿನ ಚಂಪಾರಣ್ಯದ ನೀಲಿಯ ಕೋಟಿಗಾರರ ದುರವಸ್ಥೆಗಾಗಿ ಗಾಂಧಿಯವರು ಸೇವೆಸಲ್ಲಿಸುತ್ತಿರುವಾಗ, ರಾಜೇಂದ್ರರು ಅವರ ನೆರಳಿನಂತೆ ಕೆಲಸಮಾಡಿದರು. ಮುಂದೆ ರಾಜೇಂದ್ರರೇ ಈ ಕಥೆಯನ್ನು ತಮ್ಮ 'ಚಂಪಾರಣ್ಯದ ಸತ್ಯಾಗ್ರಹ'ದಲ್ಲಿ

ಉಲ್ಲೇಖಿಸಿದ್ದಾರೆ. ಹೀಗೆ ಚಂಪಾರಣ್ಯದಲ್ಲಿ ಗಾಂಧೀಜಿಯವರ ಸೇವಾ ಕಾರ್ಯವನ್ನು ನೋಡಿದ ರಾಜೇಂದ್ರರ ಜೀವನವೇ ಬದಲಾಯಿಸಿತು. ಅಂದಿನ ತನಕ ಜಾತಿವಾದಿ ಆಗಿದ್ದ ಅವರು ಜಾತಿಭೇದಭಾವನೆಯನ್ನು ತ್ಯಜಿಸಿದರು. ಗಾಂಧಿ ಹಾಗೂ ಪ್ರಸಾದರ ಸೇವೆಯ ಫಲವಾಗಿ ಚಂಪಾ ರಣ್ಯದ ರೈತರ ಸ್ಥಿತಿಯು ಸುಧಾರಿಸಿ ಶಾಲೆ, ಆಸ್ಪತ್ರೆಗಳು ಸ್ಥಾಪಿತವಾಗಿ, ಮಾಲಿಕರು ರೈತರ ಬಗೆಗೆ ಕನಿಕರವನ್ನು ತೋರಿಸತೊಡಗಿದರು.

1918ರಲ್ಲಿ ಗಾಂಧಿಯವರ ಸೇವಾಕಾರ್ಯವನ್ನು ಸಮೀಪದಲ್ಲಿದ್ದು ಅಭ್ಯಸಿಸಿದರು. ಅಲ್ಲಿ ಅವರಿಗೆ ಗುಜರಾತಿನ ಕಾರ್ಯಕರ್ತರ ಪರಿಚಯ ವಾಯಿತು. ಮುಂದೆ ಬಿಹಾರ ಪ್ರಾಂತಕ್ಕೂ ಕೊಂಗ್ರೆಸ್ ಅಧಿವೇಶನದಲ್ಲಿ ಸ್ಥಾನಮಾನ ಸಿಗುವಂತೆ ಪ್ರಸಾದರು ಮಾಡಿದರು. ಗಾಂಧಿಯವರ ಸಂಪರ್ಕ ಹೆಚ್ಚುತ್ತಿದ್ದಂತೆ ಅವರು ಜನತಾಸೇವೆಗಾಗಿ ದುಡಿದರು.

1914ರಿಂದ 18ರ ತನಕ ಪ್ರಥಮ ಜಾಗತಿಕ ಸಂಗ್ರಾಮವು ನಡೆದು ಶಾಂತವಾಯಿತು. ಅದಕ್ಕೆ ಸರಿಯಾಗಿ ಮೊಂಟೆಗ್ಯೂ–ಚೇಮ್ಸ್‌ಫೋರ್ಡರ ಕಠೋರ ಕಾನೂನು ಜ್ಯಾರಿಯಾಯಿತು. ಈ ಕಾನೂನಿನಿಂದ ಸರಕಾರವು ಯಾರನ್ನೂ ಅನಿಶ್ಚಿತ ಅವಧಿಗೆ ಕಾರಾಗೃಹದಲ್ಲಿಡಬಹುದಾಗಿತ್ತು. ಇದಕ್ಕೆ 'ರೌಲತ್ ಬಿಲ್' ಎಂದು ಹೆಸರು. 'ಫಿತೂರಿ'ಗಳನ್ನು ತಡೆಯುವುದೇ ಇದರ ಮುಖ್ಯ ಗುರಿ. ಇದನ್ನು ಸಹಿಸಲಾರದೆ ಗಾಂಧೀಜಿಯವರು, ವಿರೋ ಧಿಸಲು ಅಲ್ಲಲ್ಲಿ ಸಭೆಕರೆದರು. ಆದರೆ, ಮುಂದೆ ರೌಲತ್ ಬಿಲ್ಲು ಅಂಗೀ ಕಾರವಾದುದರಿಂದ ಗಾಂಧೀಜಿಯವರು ಅಸಹಯೋಗ ಚಳವಳವನ್ನು ಪ್ರಾರಂಭಿಸಿದ್ದರು. ರಾಜೇಂದ್ರರು ಕೊಂಗ್ರೆಸ್ಸಿನ ಪ್ರತಿಜ್ಞಾವಿಧಿ ಸ್ವೀಕಾರ ಮಾಡಿ ಅಸಹಯೋಗದಲ್ಲಿ ಭಾಗವಹಿಸಿದರು. 1919ರ ಎಪ್ರಿಲ್ 6ರಲ್ಲಿ 'ಜಲಿಯನ್‌ವಾಲ ಬಾಗಿ'ನಲ್ಲಿ ಜನರಲ್ ಡಯರನ ಆಜ್ಞೆಯಿಂದ, ನಿಶ್ಶಸ್ತ್ರ ರಾದ ಅಸಹಾಯಕ ಜನರ ಗುಂಪಿನ ಮೇಲೆ ನಡೆದ ಗೋಳಿಬಾರು ಮತ್ತು ನರಹತ್ಯೆಯಿಂದ ಪ್ರಸಾದರು, ಇತರ ಭಾರತೀಯರಂತೆ, ದೇಶ ವಿಮೋಚನೆ ಗಾಗಿ ನಿರ್ಧಾರವನ್ನು ಬಲಪಡಿಸಿದರು.

ಜನರು ಸ್ವಾವಲಂಬಿಗಳಾಗುವಂತೆ ಖಾದಿ ಪ್ರಚಾರವನ್ನು 1921ರಲ್ಲಿ ಬಿಹಾರದಲ್ಲಿ ಕೈಗೊಂಡರು. ಅಲ್ಲಲ್ಲಿ ಅವರು ಖಾದಿಪ್ರಚಾರಕ್ಕಾಗಿ ಮಾಡಿದ ಭಾಷಣದ ಸಂಗ್ರಹವು "ಖಾದಿಯ ಅರ್ಥಶಾಸ್ತ್ರ ಅಥವಾ ಇಕೊನೊಮಿಕ್ಸ್

ಆಫ್ ಖಾದಿ" ಎಂಬ ಹೆಸರಿನಿಂದ ಪ್ರಕಟವಾಯಿತು. ಹಳ್ಳಿಗರ ಸೇವೆಗಾಗಿ ದುಡಿದರು. ಗಾಂಧಿಯವರ ಅಪೇಕ್ಷೆಯಂತೆ ಪಾಟ್ನಾದ ಗೋಸೇವಾ ಸಮ್ಮೇಳನದ ಅಧ್ಯಕ್ಷರಾಗಿ, ಅಲ್ಲಿನ ಗೋಸೇವಾ ಸಂಘವನ್ನು ರಿಜಿಸ್ಟರ್ ಮಾಡಿಸಿದರು. ಗೋವುಗಳು ರಾಷ್ಟ್ರೀಯ ಸಂಪತ್ತು ಎಂಬ ಭಾವದಿಂದ ಪ್ರಚಾರ ಮಾಡಿದರು. ಮದ್ಯಪಾನದಿಂದಾಗುವ ಹಾನಿಗಳನ್ನು ವಿವರಿಸಿದರು.

ಬಿಹಾರ ಪ್ರಾಂತೀಯ ಕಾಂಗ್ರೆಸ್ಸು ನಷ್ಟಕಷ್ಟವನ್ನನುಭವಿಸುತ್ತಿರುವಾಗ ತಮ್ಮ ಕೈಲಾದ ಸಹಾಯವನ್ನು ಮಾಡಿದರು. ಮುಂದೆ ರಾಮಘಡದಲ್ಲಿ ಕಾಂಗ್ರೆಸ್ ಅಧಿವೇಶನವು ನಡೆದಾಗ, ಅದರ ಹೆಚ್ಚಿನ ವ್ಯವಸ್ಥೆಯನ್ನು ರಾಜೇಂದ್ರರೇ ನಿರ್ವಹಿಸಿದ್ದರು.

ಜನಜಾಗೃತಿಗಾಗಿ ದೇಶದ ಪ್ರತಿಯೊಂದು ಪ್ರಾಂತದಲ್ಲೂ ಸಂಚರಿಸಿ, ಸಾಕಷ್ಟು ವಿರಾಮವಿಲ್ಲದೆ, ಪ್ರಚಾರ ಭಾಷಣವನ್ನು ಮಾಡಿದುದರಿಂದ ಇವರಿಗೆ ಉಬ್ಬಸ ರೋಗವು ಕಾಣಿಸಿಕೊಂಡಿತು. ತೀರ ಅವಶ್ಯವಿದ್ದಷ್ಟು ವಿಶ್ರಾಂತಿ ಪಡೆದು ಮದನಮೋಹನ ಮಾಲವೀಯರೊಂದಿಗೆ ಅಸ್ಸಾಮನ್ನು ಸುತ್ತಿದರು. ಮುಂದೆ ಗಡಿನಾಡಿನ ಗಾಂಧಿಯೆನಿಸಿದ ಖಾನ್ ಅಬ್ದುಲ್ ಗಫರ್ ಖಾನರ ಸಂಗಡ ಗಡಿನಾಡಿನಲ್ಲಿ ಸಂಚರಿಸಿದರು.

1920ರ ಆಗಸ್ಟಿನಲ್ಲಿ ಸೇರಿದ ಬಿಹಾರ ಪ್ರಾಂತ್ಯದ ರಾಜಕೀಯ ಸಮ್ಮೇಳನದ ರಾಜೇಂದ್ರರು ಅಧ್ಯಕ್ಷರಾದರು. ಮುಂದೆ ಭಾಗಲ್ಪುರದ ಸಮ್ಮೇಳನದಲ್ಲೂ ಭಾಗವಹಿಸಿ ಜನರಿಗೆ ಅಸಹಯೋಗದ ನೀತಿಯನ್ನು ಪ್ರತಿಪಾದಿಸಿದರು. ಅದೇ ವರ್ಷ ಕಾಂಗ್ರೆಸ್ಸೂ ಅಸಹಯೋಗದ ಠರಾವನ್ನು ಕಾರ್ಯಗತಮಾಡಲು ಒಪ್ಪಿತು. ಮುಂದೆ ರಾಜೇಂದ್ರರು ವಕೀಲವೃತ್ತಿಗೆ ತಿಲಾಂಜಲಿಯಿತ್ತರು. ತಾನು ಜನತೆಯವನಾಗಿ, ಬಿಹಾರಿನ ಜನತೆಯ ಕಣ್ಮಣಿಯೆನಿಸಿದರು. ರಾಜೇಂದ್ರರ ಪ್ರಯತ್ನದ ಫಲವಾಗಿ ಬಿಹಾರಿನ ಬಂಧುಗಳು ಶಿಕ್ಷಣಸಂಸ್ಥೆಗಳನ್ನು ಬಹಿಷ್ಕರಿಸಿ ರಾಷ್ಟ್ರೀಯ ವಿದ್ಯಾಲಯಗಳಿಗೆ ಪ್ರೋತ್ಸಾಹವಿತ್ತರು. ಇದರಿಂದಾಗಿ 'ಸಾಧಕ ಆಶ್ರಮ'ಗಳೂ 'ಕಾಶಿ ವಿದ್ಯಾಪೀಠ'ವೂ ಹುಟ್ಟಿದುವು. ರಾಜೇಂದ್ರರು ಪಾಟ್ನಾದ ಸೆನೇಟಿನ ಸದಸ್ಯತ್ವಕ್ಕೆ ರಾಜಿನಾಮೆಯಿತ್ತರು.

ಅಸಹಯೋಗದ ತತ್ವಗಳು: (1) ಸರಕಾರದ ಬಿರುದುಬಾವಲಿಗಳನ್ನು ತ್ಯಜಿಸುವುದು. (2) ಸರಕಾರಿ ಶಿಕ್ಷಣಸಂಸ್ಥೆಗಳಲ್ಲಿ ಪ್ರವೇಶಿಸದಿರುವುದು.

(3) ಕೌನ್ಸಿಲ ಗಳಿಗೆ ಹೋಗದಿರುವುದು. (4) ನ್ಯಾಯಸ್ಥಾನಗಳಿಗೆ ಜಗಳ ಪನ್ನು ಕೊಂಡೊಯ್ಯದೆ ತಮ್ಮತಮ್ಮೊಳಗೆ ತೀರ್ಮಾನಮಾಡಿಕೊಳ್ಳುವುದು.

ರಾಜೇಂದ್ರರ ಅಣ್ಣ ಮಹೇಂದ್ರರು ತಮ್ಮ 'ರಾವ್ ಸಾಹೇಬ್' ಎಂಬ ಬಿರುದನ್ನು ಬಿಟ್ಟರು. ರಾಜೇಂದ್ರರು ಅಲ್ಲಲ್ಲಿ ಸಾರ್ವಜನಿಕ ಸಭೆಯ ಮುಂದೆ ಕಾಂಗ್ರೆಸಿನ ಹುಟ್ಟು, ಸೇವೆ, ಕರ್ತವ್ಯಗಳ ವಿಚಾರ ಭಾಷಣ ಮಿತ್ತರು. 'ದೇಶ' ಎಂಬ ಪತ್ರಿಕೆಯನ್ನು ಪ್ರಕಟಿಸಿದರು. ಹೀಗೆ ರಾಜೇಂ ದ್ರರು ಜನಜಾಗೃತಿಯನ್ನುಂಟುಮಾಡುವಲ್ಲಿ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದರು.

ಮುಂದೆ ರಾಜೇಂದ್ರರು ಜಾತಿಯತೆಯನ್ನು ನಾಶಮಾಡುವುದಕ್ಕಾಗಿ ಹಲವು ಪ್ರಯತ್ನಗಳನ್ನು ಮಾಡಿದರು. (1) ಹಿಂದೂ-ಮುಸಲ್ಮಾನ ಐಕ್ಯ. (2) ನಿಮ್ನ ವರ್ಗದವರ ಉದ್ಧಾರ. (3) ಖಾದಿ ಮತ್ತು ಸ್ವದೇಶಿ ವಸ್ತು ಗಳ ಪ್ರಚಾರ. (4) ರಾಷ್ಟ್ರಭಾಷೆಯ ಪ್ರಚಾರ. (5) ಗ್ರಾಮೋದ್ಧಾರ. (6) ವಯಸ್ಕರ ಶಿಕ್ಷಣ. (7) ಗೋರಕ್ಷಣೆ. (8) ಮದ್ಯಪಾನ ನಿರೋಧ— ಮೊದಲಾದ ರಚನಾತ್ಮಕ ಕಾರ್ಯಕ್ಷೇತ್ರದಲ್ಲಿ ದುಡಿದರು.

1927ರಲ್ಲಿ ಮದ್ರಾಸಿನಲ್ಲಿ ಡಾ। ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ಜರಗಿದ ಕೊಂಗ್ರೆಸ್ ಅಧಿವೇಶನದಲ್ಲಿ ಅಸಾಮಾನ್ಯ ಭಾಗವಹಿಸಿದರು. ಕಲ ಕಾಲದಲ್ಲಿ ರಾಮೇಶ್ವರದ ಮಾರ್ಗವಾಗಿ ಸಿಂಹಳಕ್ಕ ತೆರಳಿ, ಅಲ್ಲಿಯ ಭಾರ ತೀಯ ನಿವಾಸಿಗಳ ಸ್ಥಿತಿಗತಿಗಳನ್ನರಿತರು. ಮುಂದೆ ಬಾಬುಹರಿಯವರ ಮೊಕದ್ದಮೆಗಾಗಿ ಇಂಗ್ಲಂಡಿಗೆ ಪ್ರಯಾಣ ಬೆಳೆಸಿ, ಅವರ ವಿಚಾರ ಪ್ರಿವಿ ಕೌನ್ಸಿನಲ್ಲಿ ವಾದಿಸಿದರು. ಆಸ್ಟ್ರಿಯಾದಲ್ಲಿ ಜರಗಿದ ಶಾಂತಿಸಮ್ಮೇಳನ ದಲ್ಲಿಯೂ ಭಾಗವಹಿಸಿದರು. ಗ್ರಾಟ್ಸ್ ಎಂಬಲ್ಲಿ ಯುದ್ಧನಿಷೇಧ ಭಾಷಣ ಮಾಡುವಾಗ ಪುಂಡರು ಇವರನ್ನು ಗಾಯಗೊಳಿಸಿದರು. ಯುರೋ ಪಿನ ಎಲ್ಲಾ ಪತ್ರಿಕೆಗಳೂ ಪುಂಡರ ಕ್ರೂರಕೃತ್ಯವನ್ನು ಖಂಡಿಸಿದುವು. ಅಲ್ಲಿಂದ ಸ್ವಿಟ್ಸರ್ಲೆಂಡಿಗೆ ಹೋಗಿ, ಬರ್ಲಿನ್, ಲಿಪ್‌ಜಿಗ್ ಮಾರ್ಗವಾಗಿ ಲಂಡನ್ ವರೆಗೆ ತೆರಳಿ, ಭಾರತಕ್ಕೆ ಮರಳಿದರು. 1929ರಲ್ಲಿ ಬರ್ಮಾ ಪ್ರವಾಸವನ್ನು ಕೈಕೊಂಡಿದ್ದರು.

1930ರ ಜನವರಿ 26ರಂದು ದೇಶವಿಡೀ ಸ್ವಾತಂತ್ರ್ಯ ದಿನವನ್ನು ಆಚರಿಸಿತ್ತು. ಎಲ್ಲೆಲ್ಲೂ ಸಭೆಗಳು ನಡೆದು ಜನರು ಸ್ವಾತಂತ್ರ್ಯಕ್ಕಾಗಿ ಪಣ

ಕೊಟ್ಟರು. ಉಬ್ಬಸದಿಂದ ಬಳಲುತ್ತಿದ್ದರೂ, ಒಂದೇ ದಿನ ಅನೇಕ ಸಭೆಗಳಲ್ಲಿ ಭಾಗವಹಿಸಿದರು. ಮುಂದೆ ಗುಜರಾಥದ ಬಾರ್ಡೋಲಿಯಲ್ಲಿ ರೈತರು ಸತ್ಯಾಗ್ರಹದಲ್ಲಿ ಜಯಶೀಲರಾದುದನ್ನು ನೋಡಿದರು. ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಗಾಂಧಿಯವರು ದಂಡಿಯಲ್ಲಿ ಸತ್ಯಾಗ್ರಹ ಮಾಡುತ್ತಿದ್ದಾಗ ಪ್ರಸಾದರು ದೇಶದಾದ್ಯಂತ ಸಂಚರಿಸಿ ಸತ್ಯಾಗ್ರಹಿಗಳನ್ನು ತಯಾರುಮಾಡುತ್ತಿದ್ದರು. ಪ್ರಸಾದರನ್ನು ಗಡಿಖಾ ಎಂಬಲ್ಲಿ ಸೆರೆಹಿಡಿದರು. ಆರು ತಿಂಗಳ ಸಜೆವಿಧಿಸಿ ಹಜಾರಿಬಾಗ್ ಜೈಲಿನಲ್ಲಿರಿಸಿದರು. ಜೈಲಿನಲ್ಲಿ ಪ್ರಸಾದರು ಭಗವದ್ಗೀತೆ, ಪತಂಜಲಿಯ ಯೋಗಸೂತ್ರ ಮೊದಲಾದ ಸದ್ಗ್ರಂಥಗಳನ್ನು ಓದಿ ಮನನಮಾಡಿಕೊಂಡರು. ಸ್ವಾಮಿ ಸಹಜಾನಂದ ಸರಸ್ವತಿಯವರಿಂದ ಸಂಸ್ಕೃತವನ್ನು ಕಲಿತರು. ತಮ್ಮ ಬಟ್ಟೆಗೆ ಅವಶ್ಯವಿದ್ದ ವಸ್ತ್ರಕ್ಕೆ ತಾವೇ ನೂಲು ತೆಗೆದು ತಯಾರಿಸಿಕೊಳ್ಳುತಿದ್ದರು. ದಶಂಬರದಲ್ಲಿ ಬಂಧಮುಕ್ತರಾದರು.

1932ರಲ್ಲಿ ಗಾಂಧೀಜಿಯವರು ಬಂಧಿಸಲ್ಪಟ್ಟಾಗ, ಪ್ರಸಾದರು ಕೋಂಗ್ರೆಸಿಗಾಗಿ ಧನಸಂಗ್ರಹಕ್ಕೆ ಹೊರಟಿದ್ದರು. ಪ್ರಸಾದರನ್ನೂ ಬ್ರಿಟಿಷ್ ಸರಕಾರವು ಸೆರೆಹಿಡಿದು, ಸುಮಾರು ಹದಿನೈದು ತಿಂಗಳ ಕಾರಾಗ್ರಹವಾಸ ವಿಧಿಸಿತು. ಕಾಯಿಲೆಯಿಂದ ನರಳುತಿದ್ದ ಪ್ರಸಾದರನ್ನು ಪಾಟ್ನಾದ ಆಸ್ಪತ್ರೆಗೆ ಒಯ್ದರು. 1934ನೇ ಜನವರಿ 15ರಂದು ಡಾಕ್ಟರರ ಸಲಹೆಯ ಮೇರೆಗೆ ಬಂಧವಿಮೋಚನೆಗೊಳಿಸಲ್ಪಟ್ಟರು.

1942ರ 'ಚಲೇ ಜಾವ್' (Quit India) ಚಳವಳಿಯಲ್ಲಿ ಭಾಗವಹಿಸಿದರು. ಅನಂತರ ಸರ್ ಸ್ಟಾಫೋರ್ಡ್ ಕ್ರಿಪ್ಸರ ಗೋಷ್ಠಿಯ ಸಂಧಾನದ ಮಾತುಕತೆಯು ವಿಫಲವಾಗಲು, 1942ನೇ ಅಗೋಸ್ತು 8ನೇ ದಿನ ಸತ್ಯಾಗ್ರಹ ಹೂಡಬೇಕೆಂದು ಕೋಂಗ್ರೆಸು ನಿಶ್ಚಯಿಸಿತು. ಅಗೋಸ್ತು 9ರ ಬೆಳಗ್ಗೆ ಮುಖಂಡರ ದಸ್ತಗಿರಿಯಾಯಿತು. ಪ್ರಸಾದರೂ ಕಾರಾಗ್ರಹವನ್ನು ಸೇರಿ, ಬಾಂಕೀಪುರದಲ್ಲಿ ಒಂದು ತಿಂಗಳು ಕಳೆದು, ಪಾಟ್ನಾಕ್ಕೆ ಬಂದರು. ಅಲ್ಲಿಯ ಜೈಲಿನ ವಾಸದಲ್ಲಿ 'ವಿಭಜಿತ ಭಾರತ' ('ಇಂಡಿಯಾ ಡಿವೈಡೆಡ್' ಎಂಬ ಉದ್ಗ್ರಂಥವನ್ನು ರಚಿಸಿದರು. ಮೇಲೆ ತಮ್ಮ 'ಆತ್ಮಕಥೆ'ಯನ್ನು ಬರೆದರು. 1945ನೇ ಜೂನ್ 15ರಂದು ಪ್ರಸಾದರು ಬಿಡುಗಡೆಹೊಂದಿದರು. ಇದೇ ಅವರ ಹಾಗೂ ಇತರ ದೇಶೀಯ ಧುರೀಣರ ಕೊನೆಯ ಕಾರಾಗ್ರಹವಾಸವಾಗಿತ್ತು.

1934ನೇ ಜನವರಿ 14ರಂದು ಬಿಹಾರದಲ್ಲಿ ಭೀಕರ ಭೂಕಂಪ ಉಂಟಾಗಿ ಆ ಸಮೃದ್ಧ ನಾಡು ಒಂದೆರಡು ಗಂಟೆಗಳ ಸಮಯದಲ್ಲಿ ಸ್ಮಶಾನ ಭೂಮಿಯುಂಟಾಯಿತು. ಭೂಕಂಪದಿಂದ ನೊಂದವರ ಜನಸಂಖ್ಯೆ ಬಹಳ ವಾಗಿತ್ತು. 1934ನೇ ಜನವರಿ 15ರಂದು ಬಿಡುಗಡೆಹೊಂದಿದ ಪ್ರಸಾದರು ಬಿಹಾರಿನಲ್ಲಿ 'ಸೆಂಟ್ರಲ್ ರಿಲೀಫ್ ಕಮಿಟಿ'ಯನ್ನು ತೆರೆಯುವಲ್ಲಿ ಮುಂದಾದರು. ಕೈಯಲ್ಲಿ ಗುದ್ದಲಿ ಹಿಡಿದೂ ಕೆಲಸಮಾಡಿ, ಜನತೆಗೆ ಮಾರ್ಗ ದರ್ಶನಮಾಡಿದರು. ಜನರಿಗಾಗಿ ನಿಧಿಯನ್ನು ಕೂಡಿಸಿದರು. ಗೃಹರಹಿತ ರಿಗೆ ಗುಡಿಸಲು, ಹಸಿದವರಿಗೆ ಅಶನ, ಬತ್ತಲೆಯಾದವರಿಗೆ ವಸನ ವನ್ನೀಯನ್ನು ಪ್ರಸಾದರು ದಿವಾರಾತ್ರಿ ದುಡಿದರು.

1937ರಲ್ಲಿ ಭಾರತದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಭಾರತದ ಹೊಸ ಕಾನೂನಿನ ಮೇರೆಗೆ, ಆಗಿನ ಹನ್ನೊಂದು ಪ್ರಾಂತ್ಯಗಳ ಪೈಕಿ ಏಳರಲ್ಲಿ ಮಂತ್ರಿ ಮಂಡಲಗಳಾದುವು. ಈ ಮಂತ್ರಿ ಮಂಡಲಗಳು ಮೂರು ಜನರ 'ಪಾರ್ಲಿಮೆಂಟರಿ ಸಬ್ ಕಮಿಟಿ'ಯನ್ನು ತಯಾರಿಸಿದುವು. ಈ ಮೂರು ಜನರ ಸಂಘದಲ್ಲಿ ರಾಜೇಂದ್ರರೂ ಒಬ್ಬರು. ಮುಂದೆ ಕಾನ್ಪುರ ಮತ್ತು ಬಿಹಾರದ ಕಾರ್ಮಿಕರಿಗಾಗಿ ದುಡಿದರು.

1934ರ ಬಿಹಾರದ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷರಾದ ರಾಜೇಂದ್ರರ ಕಾಲದಲ್ಲಿ ಹಿಂದೂ ಮುಸ್ಲಿಮರ ಐಕ್ಯಕ್ಕೆ ಮಾತುಕತೆಗಳು ನಡೆದಿದ್ದುವು. ಆದರೆ, ಫಲಕಾರಿಯಾಗಲಿಲ್ಲ. ಕಾಂಗ್ರೆಸಿನ ಇತಿಹಾಸವು ಬರೆಯಲ್ಪಟ್ಟಿತು. ಕಾಂಗ್ರೆಸ್ಸಿಗೆ 50 ವರ್ಷಗಳು ತುಂಬಿದ್ದರಿಂದ ಅದು ಸ್ವರ್ಣ ಜಯಂತಿಯನ್ನು ಆಚರಿಸಿತು. ಇವರು ಕಾಂಗ್ರೆಸಿನ ಅಧ್ಯಕ್ಷರಾಗಿ 1934ನೇ ಅಕ್ಟೋಬರದಿಂದ 1936ರ ಮಾರ್ಚಿ ತನಕ ಇದ್ದರು. 1936ರಲ್ಲಿ ಕಾಂಗ್ರೆಸಿನ ಮುಖಂಡರಲ್ಲಿ ಮತಭೇದವುಂಟಾಗಿ ಸುಭಾಸ್ ಬೋಸರ ಅನಾರೋಗ್ಯದಿಂದಾಗಿ ತ್ರಿಪುರದ ಕಾಂಗ್ರೆಸ್ಸಿಗೂ ಪ್ರಸಾದರೇ ಅಧ್ಯಕ್ಷರಾದರು. ಹಾಗೇ ಕಾಂಗ್ರೆಸಿನವರಾದ ಆಚಾರ್ಯ ಕೃಪಲಾನಿ ಯವರು ಕಾಂಗ್ರೆಸನ್ನು ತ್ಯಜಿಸಿದಾಗ 1948ರಲ್ಲೂ ಕಾಂಗ್ರೆಸ್ಸಿನ ಅಧ್ಯಕ್ಷ ರಾಗಿದ್ದರು.

ರಾಜೇಂದ್ರರು ಎಳೆವೆಯಿಂದಲೇ ಸರಳ ಜೀವಿಗಳು. ಸಾಧುಸ್ವಭಾವ ದವರು, ವಿಚಾರಶೀಲರು. ಗೃಹಕೃತ್ಯದ ವಿಚಾರದಲ್ಲಿ 1934ರ ತನಕ

ಜವಾಬ್ದಾರಿ ವಹಿಸಿರಲಿಲ್ಲ. ರಾಜೇಂದ್ರರಿಗೆ ಅಣ್ಣ ಮಹೇಂದ್ರರೆಂದರೆ ಅತೀವ ಭಕ್ತಿ. 1934ರಲ್ಲಿ ಮಹೇಂದ್ರರು ತೀರಿಕೊಂಡಾಗ ತಮ್ಮ ರಾಜೇಂದ್ರರ ಕಂಬನಿಯು ಕೋಡಿ ಹರಿಯಿತು. ಅಂತೂ ಸಾಂಸಾರಿಕ ಜೀವನದಲ್ಲಿ ರಾಜೇಂದ್ರರು ಸಿಹಿ-ಕಹಿ ಅನುಭವಗಳನ್ನು ಪಡೆದಿದ್ದರು.

ರಾಜೇಂದ್ರರು 'ಭಾರತೀಯ ಇತಿಹಾಸ ಪರಿಷದ್'ನ ಅಧ್ಯಕ್ಷರಾಗಿದ್ದರು. ಹಿಂದೀ ಪ್ರಚಾರಕಾರ್ಯಕ್ಕಾಗಿ ಹೋರಾಡಿದರಲ್ಲದೆ, ಭಾರತದ ರಾಷ್ಟ್ರಭಾಷೆಯನ್ನಾಗಿ ಮಾಡಬೇಕೆಂದೂ ದುಡಿದರು. ಒಮ್ಮೆ ಹಿಂದೀ ಹಾಗೂ ಹಿಂದೂಸ್ಥಾನೀಗಳ ಮಿಲನಕ್ಕಾಗಿ ದಕ್ಷಿಣ ಭಾರತದ ಹಿಂದೀ ಪ್ರಚಾರ ಸಭೆಗೆ ಹಿಂದೂಸ್ಥಾನೀ ಪ್ರಚಾರ ಸಭೆಯೆಂದೇ ಹೆಸರಿಸಿದ್ದರು—ಆದರೆ ಇಂದು ಅದು ಹಿಂದೀ ಪ್ರಚಾರಸಭೆಯೇ ಆಗಿದೆ.

ವರದಕ್ಷಿಣೆಯ ವಿಚಾರದಲ್ಲಿ ಇವರು ವಿರೋಧಿಗಳು. ಅದರಲ್ಲಿ ಸೂಕ್ತ ಸುಧಾರಣೆ ಮಾಡಬೇಕೆಂದು ಬಯಸಿದರೂ, ತಮ್ಮ ಹೆಣ್ಣು ಮಕ್ಕಳ ಮದುವೆಯಲ್ಲಿ ಅನಿವಾರ್ಯವಾಗಿ ವರದಕ್ಷಿಣೆಗೆ ಬಲಿಬಿದ್ದರು.

1925ರಲ್ಲಿ ಪ್ರಸಾದರು ಕಾಯಸ್ಥ ಸಭೆಯ ಅಧ್ಯಕ್ಷರಾಗಿ ಅಂತರ್ಜಾತಿ ವಿವಾಹ, ವರದಕ್ಷಿಣೆಯ ನಿರ್ಮೂಲನ, ಬಾಲವಿಧವಾ ವಿವಾಹದ ಠರಾವನ್ನು ಮಂಡಿಸಿದರು. ಬಂಗಾಳಿ ಬಿಹಾರಿಗಳಲ್ಲಾದ ಪ್ರಕ್ಷುಬ್ಧ ವಾತಾವರಣವನ್ನು ಶಾಂತಗೊಳಿಸಿದರು. ಹೀಗೆ ಬಾಬೂ ರಾಜೇಂದ್ರರ ಜೀವನವಿಡೀ ಸಮಾಜಕಲ್ಯಾಣಕ್ಕಾಗಿ ಕಳೆಯಲ್ಪಟ್ಟಿದೆ.

ಕಾಂಗ್ರೆಸು—ಮುಸ್ಲಿಂ ಲೀಗ್ ಎನ್ನುವ ಎರಡು ಪಕ್ಷಗಳುಂಟಾಗಿ ಹಿಂದೂಸ್ಥಾನ, ಪಾಕಿಸ್ಥಾನಕ್ಕಾಗಿ ಹೋರಾಡಿ ಮುಂದೆ 1946ನೇ ಸಪ್ಟಂಬರ 2ರಂದು ನಡುಗಾಲ ಸರಕಾರ ಸ್ಥಾಪನೆಯಾದಾಗ ರಾಜೇಂದ್ರರೂ ಅದರ ಓರ್ವ ಮಂತ್ರಿಗಳಾದರು. ಭಾರತದ ವ್ಯವಸಾಯ ಹಾಗೂ ಆಹಾರ ಶಾಖೆಯು ಅವರಿಗೆ ಬಂತು. 1916ನೇ ಡಿಸೆಂಬರ್ 9ರಂದು ಭಾರತದ ರಾಜ್ಯಾಂಗಸಭೆಯು ಡಾ| ಸಚ್ಚಿದಾನಂದ ಸಿಂಹರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು ಸ್ವತಂತ್ರಭಾರತಕ್ಕೆ ಯೋಗ್ಯಶಾಸನವನ್ನು ರಚಿಸಲು ರಾಜೇಂದ್ರರನ್ನೇ ಸ್ಥಾಯಿ ಅಧ್ಯಕ್ಷರನ್ನಾಗಿ ಆರಿಸಿತು.

ಮುಂದೆ 1947ನೇ ಅಗಸ್ಟ್ 15ರಂದು ಭಾರತವು ಸ್ವತಂತ್ರವಾಯಿತು. ಆದರೆ ರಾಜಕೀಯ ಸ್ವಾತಂತ್ರ್ಯವದಕ್ಕೆ ದೊರೆತಿದ್ದರೂ

ಆರ್ಥಿಕ ಸ್ವಾತಂತ್ರ್ಯವು ಸಿಕ್ಕಿರಲಿಲ್ಲ. ನಿರಾಶ್ರಿತರ ಸಮಸ್ಯೆ, ಚಿಕ್ಕ ಚಿಕ್ಕ ತುಂಡರಸರು, ಆಹಾರ ಸಮಸ್ಯೆ ಮೊದಲಾದುವುಗಳು ಭಾರತಕ್ಕೆ ಬಂದಣಿಗೆಯಂತೆ ಅಂಟಿದ್ದುವು. 1950ರ ಜನವರಿ 26ರಂದು ಭಾರತವು ಗಣರಾಜ್ಯವೆನಿಸಿತು.

ಕಂದುಬಣ್ಣದ, ಗಾಂಧೀಟೋಪಿಯ, ಒರಟು ಕುಚ್ಚುಮೀಸೆಯ, ಎಳೆನಗೆಯನ್ನು ಬೀರುವ ಮುಖದ ಬಾಬೂ ರಾಜೇಂದ್ರ ಪ್ರಸಾದರೇ 1950ನೇ ಜನವರಿ 26ರಿಂದ ಭಾರತದ ರಾಷ್ಟ್ರಾಧ್ಯಕ್ಷರಾಗಿದ್ದಾರೆ. ಅಹಂ ಎಂದರೇನೆಂದರಿಯದ ಬಾಬೂ ರಾಜೇಂದ್ರರು, ಪ್ರಮಾಣ ವಚನವನ್ನು ಸ್ವೀಕರಿಸಿದಂದಿನಿಂದ ನುಡಿದಂತೆ ನಡೆದಿದ್ದಾರೆ.

"ಇಂದಿನ ಮಕ್ಕಳೇ ಮುಂದಿನ ಜನಾಂಗವೆನಿಸಿದ್ದ ಭಾರತೀಯ ಪುತ್ರರೇ! ನೂರಾರು ವರ್ಷಗಳ ಪರದಾಸ್ಯ ಶೃಂಖಲೆಯಿಂದ ತನುತೆತ್ತು, ರಕ್ತದೋಕುಳಿಯನ್ನು ಚೆಲ್ಲಿ, ಶಾಂತಿಯುತ ಕ್ರಾಂತಿಯಿಂದ ಗಳಿಸಿಕೊಂಡ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದಲ್ಲದೆ, ಆರ್ಥಿಕ ಹಾಗೂ ಸಾಮಾಜಿಕ ಸ್ವಾತಂತ್ರ್ಯವನ್ನು ಗಳಿಸಿಕೊಂಡು ಮನೋವಾಕ್ಕಾಯಗಳಿಂದ ಬಂಧುಭಾವದಿಂದ ಮಾತೆಯ ಸೇವೆ ಮಾಡಿರಿ!"—1950ನೇ ಜನವರಿ 26ರ ರಾಜೇಂದ್ರರ ಭಾಷಣ.

ಹೀಗೆ ಸಕಲ ಕ್ಷೇತ್ರದಲ್ಲೂ ದುಡಿದು ಜನಜಾಗೃತಿಯನ್ನುಂಟುಮಾಡಿ, ಇಂದು ಜನತಾರಾಜ್ಯವಾದ ಭಾರತದ ನಾಲ್ಕು ಕಲಶಗಳಾದ ರಾಷ್ಟ್ರಧ್ವಜ, ರಾಷ್ಟ್ರಗೀತೆ, ರಾಷ್ಟ್ರಾಧ್ಯಕ್ಷ, ರಾಷ್ಟ್ರೀಯ ಚಿಹ್ನೆಗಳಲ್ಲಿ ಒಂದಾಗಿರುವರು. ಅವರು ತೋರಿಸಿದ ಮಾರ್ಗದಲ್ಲಿ ನಡೆದು, ದೇಶಹಿತರಕ್ಷಣೆಗಾಗಿ ಈ ಮಹಿಯೋದಿದ ಪ್ರತಿಯೊಬ್ಬನೂ ಯತ್ಕಿಂಚಿತ್ ಸೇವೆ ಸಲ್ಲಿಸಿದಲ್ಲಿ ಭಾರತಮಾತೆಯು ಧನ್ಯೆ!

Edited, Printed & Published by K. V. Shenoy
at The Prabhat Printers, Ltd., Mangalore.